ಮುಂದುವರೆಸಿದೆವು. ಕೊನೆಗೆ '45 ನಿಮಿಷವಾಯಿತಲ್ಲ, ಇನ್ನು CPR ನಿಲ್ಲಿಸೋಣ' ಎಂಬ ಸಲಹೆ ಬಂದಾಗ, ಇದು ಕೊನೆಯ ಇಂಜೆಕ್ಷನ್, ಇದರಲ್ಲೂ ಆಗಿಲ್ಲವೆಂದರೆ ನಮ್ಮ ಪ್ರಯತ್ನವನ್ನು ನಿಲ್ಲಿಸೋಣ ಎಂದು ನಿಶ್ಚಯಿಸಿದೆವು. ಯಾವುದೇ ಭರವಸೆಯಿಲ್ಲದೆ ನಾವು ಆ ಕೊನೆಯ ಇಂಜೆಕ್ಷನ್ (Adrenaline) ಕೊಟ್ಟು, CPR ಮುಂದುವರೆಸಿದೆವು. ಏನಾಶ್ಚರ್ಯ? ಆತನ ಹೃದಯಬಡಿತ ಶುರುವಾಯಿತು. ನಂತರ ಬಿ.ಪಿ. ಕೂಡ ಸುಧಾರಿಸಿತು. ಆತನನ್ನು ಐಸಿಯುಗೆ ಶಿಫ್ಟ್ ಮಾಡಿದೆವು. ವೆಂಟಿಲೇಟರ್ ಮತ್ತಿತರ ಜೀವರಕ್ಷಕ ಔಷಧಗಳ ಬೆಂಬಲದಿಂದ ಆತನಿಗೆ ಅಂಜಿಯೋಗ್ರಾಮ್ ಮತ್ತು ಅಂಜಿಯೋಪ್ಲಾಸ್ಟಿಯನ್ನು ಮಾಡಲಾಯಿತು. ಆತ ಕ್ರಮೇಣ ಗುಣಮುಖನಾದ. ಸುಮಾರು ಎರಡು ವಾರದ ನಂತರ ಮನೆಗೆ ಕಳಿಸಿಕೊಟ್ಟೆವು. ಆತನು ಬದುಕಿಬಂದದ್ದು ಒಂದು ಪವಾಡವೇ ಸರಿ. ಆತ 8 ವರ್ಷದ ನಂತರ ಈಗಲೂ ನಮ್ಮನ್ನು ಕಾಣಲು ಬರುತ್ತಿರುತ್ತಾನೆ. ಯಮರಾಜ ಯಾಕೋ ಅಂದು ಒಳ್ಳೆಯ ಮೂಡಿನಲ್ಲಿ ಇದ್ದನೆಂದು ಕಾಣುತ್ತದೆ. ಹಾಗಾಗಿ ಆತನೊಂದಿಗಿನ ಈ ಯುದ್ಧದಲ್ಲಿ ನಮ್ಮನ್ನೇ ವಿಜಯಿಗಳು ಎಂದು ಘೋಷಿಸಿದ. ಯಮರಾಜ ಅಂದು ರಜೆಯಲ್ಲಿದ್ದನೆಂದು ಕಾಣುತ್ತದೆ.

ಇದೇ ರೀತಿ ಒಬ್ಬ ಎಂಜಿನಿಯರ್ ಹೃದಯಾಘಾತವಾಗಿ ಆಸ್ಪತ್ರೆಗೆ ಬಂದ. ಆತನೊಂದಿಗೆ ನಾವು ಮಾತನಾಡುತ್ತಿರುವಾಗ, ನಮ್ಮ ಕಣ್ಣೆದುರೇ ಆತನಿಗೆ ಹೃದಯಸ್ತಂಭನವಾಗಿ, CPR ಮಾಡಿ, ಹತ್ತು–ಹದಿನೈದು ಬಾರಿ ಶಾಕ್ ಥೆರಪಿ ಕೊಟ್ಟು ಉಳಿಸಿದೆವು. ನನಗೆ ಸಾವಿನ ಕದವನ್ನು ತಟ್ಟಿ ತಿರುಗಿ ಬಂದವರನ್ನು ಅವರ ಅನುಭವಗಳನ್ನು ಕೇಳುವ ಹುಚ್ಚು. ಮನುಷ್ಯನಿಗೆ ಸಾಯುವ ಹಂತದಲ್ಲಿ, ಯಮನೋ ಇಲ್ಲವೇ ಕೋಣವೋ ಕಾಣುವುದೆಂದು ಓದಿದ್ದ ನಾನು ಸುಮ್ಮನಿರಲಾರದೆ ಒಂದೆರಡು ದಿನದ ನಂತರ ಆತನಿಗೆ 'ನೀನು ಪ್ರಜ್ಞೆ ತಪ್ಪಿದಾಗ ಯಾರಾದರು ಕಾಣಿಸಿದ್ರಾ? ಕೋಣ ಅಥವಾ ಕೋಣದ ಮೇಲೆ ಕುಳಿತಿರುವ ವ್ಯಕ್ತಿಯನ್ನು ನೋಡಿದ ನೆನಪೇನಾದ್ರೂ ಇದೆಯಾ?' ಎಂದು ಪ್ರಶ್ನಿಸಿದೆ. ನನ್ನ ಪ್ರಶ್ನೆ ಅವನಿಗೆ ಅರ್ಥವಾಗಲಿಲ್ಲ. ಅದಕ್ಕೆ ಆತನಿಗೆ ನೇರವಾಗಿ 'ನಿನಗೆ ಯಮ ಏನಾದ್ರೂ ಕಾಣಿಸಿಕೊಂಡನಾ? ಪ್ರಜ್ಞೆ ತಪ್ಪಿದಾಗ ಯಾರ ಮುಖವನ್ನಾದರೂ ಕಂಡ ನೆನಪಿದೆಯಾ?' ಎಂದು ಕೇಳಿದ್ದಕ್ಕೆ ಆತ 'ನಿಮ್ಮ ಮುಖ ಸರ್' ಎಂದ! ಪ್ರಶ್ನೆ ಕೇಳಿದ ನಾನು ಇಂಗು ತಿಂದ ಮಂಗನಾಗಿದ್ದೆ.

ಇಲ್ಲಿ ಎಲ್ಲಾ ದೇಶದ ರೋಗಿಗಳನ್ನು ಬಹಳ ಹತ್ತಿರದಿಂದ ನೋಡಿ, ಅವರೊಂದಿಗೆ ಮಾತನಾಡಿದ ಮೇಲೆ ನನಗೆ ತಿಳಿದು ಬಂದದ್ದೇನೆಂದರೆ – ನಾವು ಅನುಮಾನದಿಂದ ನೋಡುವ ಪಾಕಿಸ್ತಾನ, ಬಾಂಗ್ಲಾದೇಶದ ಜನರಿಗೂ ಕೂಡ ನಮ್ಮಂತೆಯೇ ಎರಡು ಕೈಕಾಲು ಕಣ್ಣುಗಳಿವೆ; ಅವರೂ ನಮ್ಮಂತೆ ಮನುಷ್ಯರು; ಅವರೂ ನಮ್ಮಂತೆಯೇ ದುಡಿಯಲು ತಮ್ಮ ಕುಟುಂಬದವರನ್ನು ಬಿಟ್ಟು ಬಂದು, ಇಲ್ಲಿ ಬದುಕು ಕಟ್ಟಿಕೊಳ್ಳಲು ಶ್ರಮಪಡುತ್ತಿದ್ದಾರೆ ಎನ್ನುವುದು. ನಾವು ತಿಳಿದಿರುವಂತೆ ಎಲ್ಲರೂ ಕೆಟ್ಟವರೇನಲ್ಲ. ಅವರಿಗೂ ನಮ್ಮಂತೆಯೇ ಅವರ ಹಳ್ಳಿಯಲ್ಲಿ ಇವರ ದುಡಿಮೆಯನ್ನೇ ನಂಬಿ, ಇವರು ಕಳಿಸುವ ಹಣದಿಂದ ಹೊಟ್ಟೆ ತುಂಬಿಸಿಕೊಳ್ಳಬೇಕಾದ ಕುಟುಂಬವಿದೆ. ಮಗನನ್ನು ನೆನೆದು ಕಣ್ಣೀರು ಹಾಕುವ ವೃದ್ಧ ತಂದೆ–ತಾಯಿಯರಿದ್ದಾರೆ. ಶಾಲೆಗೆ ಹೋಗುವ ಪುಟ್ಟ ಮಕ್ಕಳಿದ್ದಾರೆ. ಯಾರೋ ಒಂದಿಬ್ಬರು ಮಾಡುವ ಕೆಡುಕುಗಳಿಗೆ ಇಡೀ ದೇಶವನ್ನು ದೂಷಿಸುವುದು ಎಷ್ಟು ಸರಿ? ಎಂಬುದು ಆ ದೇಶದ ಜನರ ಮಾತು–ನಡವಳಿಕೆಗಳನ್ನು ಕಂಡಾಗ ನನಗನ್ನಿಸಿತು.

ಒಮ್ಮೆ Code Blue ಅನೌನ್ಸ್ ಮಾಡಿದರು. ನಮ್ಮ ತಂಡದ ಎಲ್ಲರೂ ಅಲ್ಲಿ ಹಾಜರಾದೆವು. ಒಬ್ಬ ವ್ಯಕ್ತಿಗೆ ಹೃದಯಸ್ತಂಭನವಾಗಿತ್ತು. ಆತನನ್ನು ಉಳಿಸಲು ಬಂದ ತಂಡದಲ್ಲಿ ಭಾರತದವನಾದ ನಾನು, ನನ್ನ ಜೊತೆಯಲ್ಲಿ ಪಾಕಿಸ್ತಾನ ಮತ್ತು ಇರಾನಿನ ವೈದ್ಯರಿದ್ದರು. ಫಿಲಿಫೀನ್ಸ್, ಒಮಾನ್ ಮತ್ತು ಕೇರಳದ ನರ್ಸ್‌ಗಳಿದ್ದರು. ತಂಡದ ಸದಸ್ಯರೆಲ್ಲಾ ಬೇರೆ ಬೇರೆ ದೇಶದವರಾಗಿದ್ದೆವು. ಹೀಗೆ ನಾವೆಲ್ಲರೂ ಸೇರಿ, ಆತನನ್ನು ಬದುಕಿಸಲು ಎಂದಿನಂತೆ ಪ್ರಯತ್ನಮಾಡುತ್ತಿದ್ದೆವು. ಆದರೆ ಹೃದಯಸ್ತಂಭನವಾದ ಆ ವ್ಯಕ್ತಿಯ ದೇಶ, ಜಾತಿ, ಧರ್ಮ ಯಾರಿಗೂ ತಿಳಿದಿರಲಿಲ್ಲ, ನಮಗೆ ಅದು ಬೇಕಾಗಿಯೂ ಇರಲಿಲ್ಲ. ಬೇರೆ ಬೇರೆ ದೇಶದ ನಾವೆಲ್ಲರೂ ಸೇರಿ ಆ ವ್ಯಕ್ತಿಯನ್ನು ಉಳಿಸಲು ಮಾಡುತ್ತಿದ್ದ ಪ್ರಯತ್ನ, ನನಗೆ ನಿಜ ಅರ್ಥದಲ್ಲಿ ಕುವೆಂಪುರವರ 'ವಿಶ್ವಮಾನವ ಧರ್ಮ'ದ ಸಾಕ್ಷಾತ್ಕಾರ ಮಾಡಿಸಿತ್ತು. ●